‘ಹೊರಗಿನವರು’ ಬರೆಯಲು ಆರಂಭಿಸಿ, ಸ್ವತಃ ಕಲಾಕೃತಿ ರಚನೆ ಮಾಡಿದ್ದು ಸಹ ಇದೆ. ಬಂಟನೂರರ ಬರವಣಿಗೆಯಲ್ಲಿ ಕಲೆಯ ಕುರಿತಾಗಿ ಚಿಂತಿಸಲು ಇಂತಹ ನೂರು ದಿಕ್ಸೂಚಿಗಳಿವೆ. ಮುನ್ನುಡಿಯಲ್ಲಿ ಕೆ.ವಿ. ಸುಬ್ರಹ್ಮಣ್ಯಂ ಅವರು ಹೇಳುವಂತೆ, ಡಿಜಿಟಲ್ ಜಗತ್ತಿನ ಸಾರ್ವಭೌಮತ್ವದ ನಡುವೆಯೂ ಕನ್ನಡದಲ್ಲಿ ಬರೆದು, ಪ್ರಕಟಿಸಿ, ಇಂದಿಗೂ ಮುದ್ರಿಸುವ ಬಂಟನೂರರ ಧ್ಯಾನಸ್ಥ ನಿಲುವು ಅಪರೂಪದ್ದು. ಸ್ವತಃ ಲೇಖಕರೇ ಹೇಳಿರುವಂತೆ, ಬಿಡಿಬಿಡಿಯಾಗಿ ಕನ್ನಡ ಕಲಾಸಾಹಿತ್ಯದ ಇತಿಹಾಸದ ಲೇಖನಗಳು ಬಂದಿರಬಹುದು, ಆದರೆ ಸಮಗ್ರವಾಗಿ ಒಂದು ಪುಸ್ತಕವನ್ನು, ಅದರ ದಾಖಲಾತಿಯ ಸಶಕ್ತತೆಗಾಗಿ ಉದ್ಧರಿಸಬಹುದಾದರೆ (ಉದಾಹರಣೆಗೆ, ಶೆಲ್ಡನ್ ಪೊಲ್ಲಾಕ್ ಅಂತಹ ಕನ್ನಡದ ಜಗತ್ತಿನ ಬಗ್ಗೆ ಸಕ್ರಿಯಾಸಕ್ತರಿಗೆ) ಈ ಪುಸ್ತಕ ಮುಖ್ಯವಾಗುತ್ತದೆ.

***

ಶಿವಾನಂದರ ಪುಸ್ತಕವನ್ನು ಸಾದ್ಯಂತವಾಗಿ ಓದುವ ಅವಶ್ಯಕತೆ ಇಲ್ಲ. ದೃಶ್ಯಕಲೆ, ಕಲಾವಿದರು, ಕಲಾಸಾಮಗ್ರಿಗಳು, ಕಲಾಚಳವಳಿಗಳು ಇತ್ಯಾದಿ ಕುರಿತಾದ ಒಂದು ನಿಘಂಟು ಇದು. ನಿಘಂಟನ್ನು ಬೇಕಿದ್ದಲ್ಲಿ, ಬೇಕಾದಂತೆ, ಬೇಕಾದ ಪುಟ ತೆರೆದು ಗಮನಿಸಬಹುದು. ಇದರಲ್ಲಿನ ವರ್ಗೀಕರಣಗಳೂ ಸಹಾ ಈ ನಿಘಂಟಿನ ಗುಣಲಕ್ಷಣಗಳನ್ನು ಹೊಂದಿವೆ. ಅದೇ ಕಾರಣಕ್ಕೆ ನಿಘಂಟನ್ನು ಒಂದು ವಿಮರ್ಶಾ ಗ್ರಂಥ ಅಥವಾ ವ್ಯಾಖ್ಯಾನ ಗ್ರಂಥವನ್ನು ಪ್ರಶ್ನಿಸುವಂತೆ ಶೋಧಿಸಲಾಗದು. ಮುಂದೆಲ್ಲೋ, ಬೇರೆಲ್ಲೋ ದೃಶ್ಯ–ವಿಚಾರಣೆ ನಡೆಸಲು ಇದನ್ನು ಆಕರಗ್ರಂಥವನ್ನಾಗಿ ಸ್ವೀಕರಿಸಬಹುದು. ಬಹಳ ಜಾಣತನದಿಂದ, ಭಾಷಾತೀತವಾದ ಕಲಾಸಾಹಿತ್ಯದ ಆಕಾರಗಳಲ್ಲಿ (ಅಂದರೆ ಆಂಥಾಲಜಿ, ಮೊನೋಗ್ರಾಫ್, ಬಯೋಗ್ರಾಫ್ ಇತ್ಯಾದಿಗಳಂತಹ ವರ್ಗೀಕರಣ) ಕೆಲವನ್ನು ಬೆರೆಸಿ ಕನ್ನಡದಲ್ಲಿ ಸೋಸಿಕೊಟ್ಟಿದ್ದಾರೆ ಬಂಟನೂರರು.

ಉತ್ತರ ಹಾಗೂ ದಕ್ಷಿಣ ಎಂದು ಕರ್ನಾಟಕದ ಕಲಾಸಾಹಿತ್ಯವನ್ನು ವಿಂಗಡಿಸಿರುವುದು ಸಮಂಜಸವೆನಿಸಿದರೂ ಅವುಗಳನ್ನು ಸಮಸ್ಯಾತ್ಮಕಗೊಳಿಸುವ ಸಾಧ್ಯತೆ ಇಲ್ಲದಿಲ್ಲ.




ಸಮಕಾಲೀನ ಕನ್ನಡ ದೃಶ್ಯಕಲಾ ಸಾಹಿತ್ಯ
ಲೇ: ಡಾ. ಶಿವಾನಂದ ಎಚ್. ಬಂಟನೂರ
ಪು: 200; ಬೆ: ₹ 225
ಪ್ರ: ಅಲ್ಕಾ ಪ್ರಕಾಶನ, ವಿಜಯಪುರ.
ಫೋನ್: 9449667687.

ಬೆಂಗಳೂರಿನ ಕೆನ್ ಕಲಾಶಾಲೆಯ ಮೂಲಕ ಕಲೆ ಎಂಬ ಲೋಕವೃತ್ತಿಯನ್ನು ಪ್ರಸರಿಸಿದ ಆರ್.ಎಂ. ಹಡಪದರ ಸೀಮಾತೀತ ವ್ಯಕ್ತಿತ್ವವು ಇಂತಹ ವರ್ಗೀಕರಣಗಳನ್ನು ನಿರಾಕರಿಸುತ್ತವೆ. ಇಂತಹ ಸಾಧ್ಯತೆಗಳನ್ನು ಸ್ವತಃ ಎಂ.ಎಸ್. ಮೂರ್ತಿ ಹಾಗೂ ಸುಬ್ರಹ್ಮಣ್ಯಂ ಅವರುಗಳು ಈ ಪುಸ್ತಕದ ತಮ್ಮ ಮುನ್ನುಡಿಗಳಲ್ಲಿ ಸೂಚಿಸಿದ್ದಾರೆ ಸಹ. ಇಂಗ್ಲಿಷ್ ಹಾಗೂ ಕನ್ನಡದ ಬರಹಗಳನ್ನು ಬೇರ್ಪಡಿಸಿರುವುದು ಈ ಪುಸ್ತಕದ ಅತ್ಯಂತ ದಿಟ್ಟ ನಿರ್ಧಾರವೂ ಹೌದು. ಏಕೆಂದರೆ, ಸ್ವತಃ ಎರಡು ಭಾಷೆಗಳಲ್ಲಿ ಬರೆವ ಒಂದು ಸಂಪ್ರದಾಯವೇ ಕರ್ನಾಟಕದಲ್ಲಿದೆ (ಕೆ.ಎಸ್. ಶ್ರೀನಿವಾಸಮೂರ್ತಿ, ಸಂಧ್ಯಾ ಅಣ್ಣಯ್ಯ, ಸುರೇಶ್ ಜಯರಾಮ್ ಮುಂತಾದವರು). ಆದರೆ ಅಂತಹ ಸಾಧ್ಯತೆ, ಸಮಸ್ಯೆಗಳನ್ನು ಉಪಾಯವಾಗಿ ಬಂಟನೂರರು ಪರಿಗಣಿಸದಿರಲು ಕಾರಣ, ಅದು ಈ ಒಟ್ಟಾರೆ ಪುಸ್ತಕದ ಆಶಯದ ಹೊರಗಿನದು ಎಂಬ ಕಾರಣಕ್ಕೇ ಇರಬಹುದು.